# ಓದುತ್ತಲೇ ರೀಲ್ ಸರದಾರನಾದ ಸುಮಿತ್

■ ಸ್ಮಿತಾ ಶಿರೂರ

ನಾವೆಲ್ಲ ರೀಲ್ಸ್ ನೋಡನೋಡುತ್ತ ಮೊಬೈಲ್‌ನಲ್ಲಿ ಮುಳುಗಿದರೆ, ಈತ ರೀಲ್ಸ್ ಮಾಡಮಾಡುತ್ತ ಅದರಲ್ಲೇ ಕಳೆದು ಹೋಗಲಿಲ್ಲ. ಓದುತ್ತಲೇ ರೀಲ್ಸ್‌ಗೂ ಜೈ ಎಂದಿದ್ದಾರೆ ಧಾರವಾಡದ ಸುಮಿತ್ ಸಂಕೋಜಿ.

ಡ್ರಾಮಾ ಜೂನಿಯರ್ಸ್ ಸೀಸನ್ 2ರ ರನ್ನರ್ ಅಪ್ ಸುಮಿತ್ ಪರಿಚಯ ಬಹುತೇಕ ರೀಲ್ಸ್ ಪ್ರಿಯರಿಗೆಲ್ಲ ಇದ್ದೇ ಇದೆ. ಡ್ರಾಮಾ ಜೂನಿಯರ್ಸ್ ಸೀಸನ್ 1ರ ಸೂರಜ್ ಜೊತೆ ಸೇರಿ 2022ರಲ್ಲಿ ರೀಲ್ಸ್ ದುನಿಯಾಕ್ಕೆ ಕಾಲಿಟ್ಟ ಸುಮಿತ್ ಅಲ್ಲಿಂದ ಮುಂದೆ ಸೋಲೋ ಹಾಗೂ ಹಲವು ಪ್ರತಿಭೆಗಳ ಜೊತೆ ಸೇರಿ ವೈವಿಧ್ಯಮಯ ರೀಲ್ಸ್‌ಗಳನ್ನು ಸೃಷ್ಟಿಸಿದ್ದಾರೆ.

ಮಂಚಿಕೇರಿಯ ಸೂರಜ್ ಜೊತೆ ಕುಡುಕರ ರೀಲ್ಸ್ ಸರಣಿ, ಧಾರವಾಡದ ಕಲ್ಯಾಣಿ ಸೌದಿ ಜೊತೆ ಗೆಳೆಯ, ಗಂಡ, ಕುಡುಕ ಗಂಡ, ಗರ್ಬಾ ನೃತ್ಯ, ಪಿ.ಟಿ ಸರ್ ರೀಲ್ಸ್ ನಕ್ಕು ನಲಿಸುತ್ತವೆ. ಯೂಟ್ಯೂಬರ್‌ಗಳಾದ ಚೇತನ್, ಈಶ್ವರ್ ಹಾಗೂ ಶಿವು ಎನ್.ಜಿ. ಅವರ ಜೊತೆ ನಟಿಸಿರುವ 'ಮಂಜು ಮೇಸ್ತ್ರಿ ಸೌಕಾರ ಮಂದಿ' ಸರಣಿಯೂ ಹಾಸ್ಯದ ಹೊನಲು ಹರಿಸುತ್ತದೆ. ಮುಂದಿನ ಭಾಗಕ್ಕಾಗಿ ಕಾಯುವಂತೆ ಮಾಡುತ್ತಿದೆ. ಸೋದರ ಸಂಬಂಧಿ ಪುಟಾಣಿ ಕಲಾವಿದೆ ಸಾಹಿತಿ ಜೊತೆ ಅಣ್ಣತಂಗಿ ಸರಣಿಯೂ ನಗೆಬುಗ್ಗೆ ಉಕ್ಕಿಸುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಇವರೇ ಬರೆದು, ನಟಿಸಿದ ನೂರಾರು ರೀಲ್‌ಗಳಿಗೆ ಲಕ್ಷಗಟ್ಟಲೆ ಅಭಿಮಾನಿಗಳೂ ಹುಟ್ಟಿಕೊಂಡಿದ್ದಾರೆ.

ಉತ್ತರ ಕರ್ನಾಟಕದ ಜವಾರಿ ಭಾಷೆ ಇವರ ರೀಲ್ಸ್ ಎಂಬ ಕಿರುನಾಟಕಗಳ ಜೀವಾಳ, ಡೈಲಾಗ್, ಮೀಮ್ಸ್, ಟೈಮಿಂಗ್, ಹಾಸ್ಯ ಕವನ, ಅನಿರೀಕ್ಷಿತ ಅಂತ್ಯಗಳನ್ನು ಒಳಗೊಂಡ ಈ ಕೆಲವೇ ನಿಮಿಷಗಳ ನಾಟಕಗಳು ಯೂಟ್ಯೂಬ್, ಇನ್‌ಸ್ಟಾಗ್ರಾಂಗಳಲ್ಲಿ ವೀಕ್ಷಕರ ಮನಗೆದ್ದಿವೆ.

ರೀಲ್ಸ್ ಅಭಿನಯದಿಂದ ಮನೆಮಾತಾದ ಸುಮಿತ್ ಓದಿನಲ್ಲೂ ಮುಂದಿರುವುದು ವಿಶೇಷ. ಧಾರವಾಡದ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ 5ನೇ ಸೆಮಿಸ್ಟರ್ ಓದುತ್ತಿರುವ ಅವರು ಬಾಲ್ಯದಿಂದ ಓದಿನಲ್ಲೂ ಜಾಣ. ಮಲ್ಲಸಜ್ಜನ ಆಂಗ್ಲ ಮಾಧ್ಯಮ ಶಾಲೆಯಲ್ಲಿ 5ನೇ ತರಗತಿ ಓದುತ್ತಿದ್ದಾಗ ಶಾಲಾ ವಾರ್ಷಿಕೋತ್ಸವಕ್ಕಾಗಿ ನಾಟಕ ಆಡುತ್ತಿದ್ದರು. ಅಲ್ಲಿಂದ ನಾಟಕಗಳಲ್ಲಿ ಅಭಿರುಚಿ ಮೂಡಿತು. ಇವರ ಪ್ರತಿಭೆಗೆ ಡ್ರಾಮಾ ಜೂನಿಯರ್ಸ್ ಮೂಲಕ ದೊಡ್ಡ ವೇದಿಕೆ ಒದಗಿತು. ಎಸ್ಸೆಸ್ಸೆಲ್ಸಿಯಲ್ಲಿ ಶೇ 96, ಪಿಯು (ಪ್ರಿಸಮ್ ಕಾಲೇಜ್)ನಲ್ಲಿ ಶೇ 97 ಅಂಕ ಗಳಿಸಿ ಈಗ ಎಂಜಿನಿಯರಿಂಗ್ ಓದುತ್ತಿದ್ದಾರೆ. ವಾರಾಂತ್ಯಗಳಲ್ಲಿ ರೀಲ್ಸ್ ಮಾಡುವುದು. ಉಳಿದ ದಿನ ಓದು, ಅಧ್ಯಯನ. ಸ್ಕ್ರಿಪ್ಟ್, ಎಡಿಟಿಂಗ್ ಎಲ್ಲವನ್ನೂ ಸಮಯ ಸಿಕ್ಕಾಗ ಮಾಡುತ್ತಾರೆ. ಗೆಳೆಯರಾದ ಸಚಿನ್ ಹಾಗೂ ಋತ್ವಿಕ್ ಶೂಟಿಂಗ್ ಮಾಡುತ್ತಾರೆ.




ಮೊದಲು ಮೊಬೈಲ್‌ಗಳಲ್ಲಿ ಚಿತ್ರೀಕರಣ ಮಾಡುತ್ತಿದ್ದರು. ಎಂಜಿನಿಯರಿಂಗ್ ಸೇರಿದ ನಂತರ ತಂತ್ರಜ್ಞಾನದ ಅರಿವು ಹೆಚ್ಚಳವಾಗಿದೆ. ಶೂಟಿಂಗ್ ಹಾಗೂ ಎಡಿಟಿಂಗ್‌ಗೆ ಈಗ ಸಾಫ್ಟ್‌ವೇರ್ ಬಳಸುತ್ತಿದ್ದಾರೆ.

'2017ರಲ್ಲಿ ಸೂರಜ್ ಪರಿಚಯವಾಯ್ತು. ಅವರೊಂದಿಗೆ ಅವರ ಊರಿನಲ್ಲಿ ನಾಟಕ ಪ್ರದರ್ಶನ ಮಾಡುತ್ತಿದ್ದೆವು. ನಾವು ಅಲ್ಲಿ ಪ್ರದರ್ಶಿಸಿದ 'ಕುಡುಕರ ಪಂಚಾಯಿತಿ' ನಾಟಕಕ್ಕೆ ಬಹಳ ಜನ ಮನ್ನಣೆ ಸಿಕ್ಕಿತು. ಹೀಗಾಗಿ ಅದನ್ನೇ ಆಧಾರವಾಗಿಟ್ಟುಕೊಂಡು ಕುಡುಕರ ಹಲವು ರೀಲ್ಸ್ ಮಾಡಿದೆವು. ಅವೂ ಜನಪ್ರಿಯವಾದವು. 2022ರಲ್ಲಿ ರೀಲ್ಸ್ ಮಾಡಲು ಆರಂಭಿಸಿದೆವು. ಕ್ರಮೇಣ ರೀಲ್ಸ್ ಜಗತ್ತಿನ ಹಲವು ಪ್ರತಿಭೆಗಳ ಪರಿಚಯವಾಯ್ತು. ರೀಲ್ಸ್‌ಗಳಿಗೆ ತುಂಬಾ ಒಳ್ಳೆಯ ಪ್ರತಿಕ್ರಿಯೆ ಬಂದಿದೆ' ಎಂದರು ಸುಮಿತ್.

'ಯೂಟ್ಯೂಬ್‌ನಲ್ಲಿ 4 ಲಕ್ಷ, ಇನ್‌ಸ್ಟಾಗ್ರಾಂನಲ್ಲಿ 4.4 ಲಕ್ಷ ಫಾಲೊವರ್ಸ್ ಇದ್ದಾರೆ. ಹಾಸ್ಯದ ರೀಲ್ಸ್‌ಗಳೇ ಹೆಚ್ಚು ಸದ್ದು ಮಾಡುತ್ತವೆ. ಹೀಗಾಗಿ ಹಾಸ್ಯದ ಕಂಟೆಂಟ್‌ಗಳನ್ನೇ ಹೆಚ್ಚು ಮಾಡುತ್ತೇವೆ. ಈಚೆಗೆ ಸಾಮಾಜಿಕ ಸಂದೇಶ ನೀಡುವ ರೀಲ್ಸ್‌ಗಳನ್ನೂ ಮಾಡುತ್ತಿದ್ದೇನೆ. ಮಹಿಳಾ ದೌರ್ಜನ್ಯ ವಿರೋಧಿಸಿ, ಆಪರೇಷನ್ ಸಿಂಧೂರ ಸೇರಿ ಕೆಲವು ರೀಲ್ಸ್ ಮಾಡಿದ್ದು ಅವುಗಳಿಗೂ ಉತ್ತಮ ಪ್ರತಿಕ್ರಿಯೆ ಬಂದಿವೆ' ಎಂದು ಅವರು ತಿಳಿಸಿದರು.

'ಸಮಯ ಕಳೆಯಲೆಂದು ಮಾತ್ರ ರೀಲ್ಸ್ ಮಾಡುತ್ತಿಲ್ಲ. ಓದಿಗೆ ಕೊಡುವ ಮಹತ್ವವನ್ನು ಇದಕ್ಕೂ ಕೊಡುತ್ತಿದ್ದೇನೆ. ವೃತ್ತಿಪರವಾಗಿ ಕಂಟೆಂಟ್ ಕ್ರಿಯೇಟ್ ಮಾಡುತ್ತಿದ್ದೇನೆ. ನನ್ನ ನಟನೆಯ ಕೌಶಲಕ್ಕೆ ರೀಲ್ಸ್ ಒಳ್ಳೆಯ ವೇದಿಕೆ, ಅವಕಾಶ, ಆರ್ಥಿಕ ಬೆಂಬಲವನ್ನೂ ಒದಗಿಸಿದೆ. ನನ್ನನ್ನು ಜನ ನಟನೆಯ ಮೂಲಕ ಗುರುತಿಸುವಂತೆ ಮಾಡಿರುವುದೇ ಈ ರೀಲ್ಸ್' ಎಂದು ಅವರು ಹೇಳಿದರು.

ಸಾಮಾಜಿಕ ಜಾಲತಾಣದಲ್ಲಿಯ ಅವರ ಯಶಸ್ಸು ಸಿನಿಮಾಗಳಲ್ಲಿ ಅವಕಾಶದ ಬಾಗಿಲನ್ನು ತೆರೆದಿದೆ. ಉಡಾಳ ಸಿನಿಮಾದಲ್ಲಿ ಅಭಿನಯಿಸಿದ್ದು, ನ. 14ರಂದು ಚಿತ್ರ ಬಿಡುಗಡೆಯಾಗಿದೆ. ಮತ್ತೊಂದು ಚಿತ್ರದಲ್ಲಿ ಅಭಿನಯಕ್ಕಾಗಿ ಮಾತುಕತೆ ನಡೆಯುತ್ತಿದೆ. ■